**OS-104/2017**
**DW-2**

**ದಿನಾಂಕಃ 25.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ವಾ**ದಿ ಪರ** ಶ್ರೀ ಎಂ ಡಿ **ವಕೀಲರಿಂದಃ**

ನಾನು 7 ನೇ ತರಗತಿಯವರೆಗೂ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ನನ್ನ ಸಹಿಯನ್ನು ಕನ್ನಡದಲ್ಲಿ ಮಾಡುತ್ತೇನೆ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಗುರುಸ್ವಾಮಿ ಮತ್ತು ಸುರೇಶ್ ರವರು ನನಗೆ ಪರಿಚಯವಿರಲಿಲ್ಲ. ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನನ್ನನ್ನು ಸುರೇಶ್ ರವರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆಯಲ್ಲಿ ನಮೂದಿಸಿರುವ ವಿಚಾರಗಳನ್ನು ಸುರೇಶ್ ರವರು ಹೇಳಿ ಬರೆಸಿರುತ್ತಾರೆ. ವಾದಿಯು ಈ ದಾವೆಯನ್ನು ಏನು ಪರಿಹಾರ ಕೋರಿ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನಗೂ, ಗುರುಸ್ವಾಮಿಗೂ ಮತ್ತು ಸುರೇಶ್ ರವರು ನಡುವೆ ಯಾವುದೇ ರಕ್ತ ಸಂಬಂಧ ಇರುವುದಿಲ್ಲ. ಈ ದಾವೆಯ ಪ್ರತಿವಾದಿಯು ಮಾದಾಪುರ ಗ್ರಾಮದವರು. ಈ ದಾವೆಯ ವಾದಿಯು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಈ ದಾವೆಯ ವಾದಿಯು ಪ್ರತಿವಾದಿಯ ಸಹೋದರ ಎಂದು ಪ್ರತಿವಾದಿಯು ನನಗೆ ತಿಳಿಸಿರುತ್ತಾರೆ. ಮಾದಾಪುರ ಗ್ರಾಮದಲ್ಲಿ ಸುಮಾರು 10 ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇದೆ ಎಂದರೆ ಇರಬಹುದು ಆದರೆ ನನಗೆ ಗೊತ್ತಿಲ್ಲ.

ನಾನು ಹೆಳವರಹುಂಡಿ ಗ್ರಾಮದಲ್ಲಿ ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದೇನೆ. ಮಾದಪುರ ಗ್ರಾಮದಿಂದ ನಮ್ಮ ಹೆಳವರಹುಂಡಿ ಗ್ರಾಮಕ್ಕೆ ಸುಮಾರು 12 ಕಿ.ಮೀ ದೂರ ಇರುತ್ತದೆ. ಮೃತ ಮಲ್ಲಪ್ಪರವರು ಟಿ.ನರಸೀಪುರದ ಸಂತೆಗೆ ಬರುತ್ತಿದ್ದಾಗ ನನಗೆ ಪರಿಚಯವಾಗಿರುತ್ತಾರೆ. ಸದರಿ ಮಲ್ಲಪ್ಪರವರು ನನಗೆ 10 ವರ್ಷಗಳಿಂದ ಪರಿಚಿತರು. ನಾನು ದನಕರುಗಳ ವ್ಯಾಪಾರಕ್ಕಾಗಿ ಟಿ.ನರಸೀಪುರ ಸಂತೆಗೆ ಬಂದಾಗ ಮಲ್ಲಪ್ಪರವರು ಪರಿಚಯವಾಗಿರುತ್ತಾರೆ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ.

ನಾನು 2015 ರಲ್ಲಿ ಕೊನೆಯ ಬಾರಿ ಮಲ್ಲಪ್ಪರವರನ್ನು ತಾಲ್ಲೂಕು ಕಛೇರಿ ಬಳಿ ನೋಡಿರುತ್ತೇನೆ. ಮಲ್ಲಪ್ಪರವರು 2015 ರಲ್ಲಿ ತಾಲ್ಲೂಕು ಕಛೇರಿಯ ಬಳಿ ನನ್ನನ್ನು ಭೇಟಿ ಮಾಡಿದಾಗ ಮರಣ ಶಾಸನ ಪತ್ರ ಬರೆಯಬೇಕು ನೀನು ಬಾ ಎಂದು ತಿಳಿಸಿದ್ದರು. ಸದರಿ 2015 ರಲ್ಲಿ ಮಲ್ಲಪ್ಪರವರಿಗೆ ಸುಮಾರು 80 ವರ್ಷ

ವಯಸ್ಸಾಗಿತ್ತು ಎಂದರೆ ಸರಿ. ಸದರಿ ಮಲ್ಲಪ್ಪರವರು ನಮ್ಮ ಗ್ರಾಮಕ್ಕೆ ಬಂದು ನನ್ನನ್ನು ಮರಣ ಶಾಸನ ಪತ್ರ ಬರೆಯುವಾಗ ಬರುವಂತೆ ಕರೆದಿರಲಿಲ್ಲ. ನಾನು ಆಗಾಗ ಕೆಲಸ ಇದ್ದಾಗ ತಾಲ್ಲೂಕು ಕಛೇರಿಯ ಬಳಿ ಹೋಗಿ ಪತ್ರ ಬರಹಗಾರರ ಬಳಿ ಓಡಾಡಿಕೊಂಡು ಇರುತ್ತೇನೆ. ನಾನು ಪತ್ರ ಬರಹಗಾರರ ಕಛೇರಿಯಲ್ಲಿ ಇದಾಗ ಯಾರಾದರೂ ದಾಖಲಾತಿಗಳಿಗೆ ಸಹಿ ಮಾಡಿ ಎಂದು ಕೇಳಿಕೊಂಡಾಗ ನಾನು ಸದರಿ ದಾಖಲಾತಿಗಳಿಗೆ ಸಹಿಗಳನ್ನು ಮಾಡಿರುತ್ತೇನೆ. ಸದರಿ ಸಂಧರ್ಭದಲ್ಲಿ ಸಹಿ ಮಾಡಲು ನಾನು ಹಣವನ್ನು ಪಡೆಯುತ್ತಿದ್ದೆನು ಎಂದರೆ ಸರಿಯಲ್ಲ. ಮಲ್ಲಪ್ಪರವರು ಯಾವಾಗ ನನ್ನನ್ನು ಭೇಟಿ ಮಾಡಿದರು ಎಂದು ನಿರ್ದಿಷ್ಟ ದಿನಾಂಕ ನನಗೆ ನೆನಪಿಲ್ಲ. ಮಲ್ಲಪ್ಪರವರಿಗೆ 80 ವರ್ಷ ವಯಸ್ಸಾಗಿದ್ದ ಕಾರಣ ಮಲ್ಲಪ್ಪರವರು ತಮ್ಮ ಜೊತೆ ಯಾರನ್ನಾದರೂ ಕರೆದುಕೊಂಡು ಬರುತ್ತಿದ್ದರು ಎಂದರೆ ಸಾಕ್ಷಿದಾರರು ನಾನು ಗಮನಿಸಿಲ್ಲ ಎಂದು ನುಡಿಯುತ್ತಾರೆ. ಮಲ್ಲಪ್ಪರವರಿಗೂ ನನಗೂ ವಯಸ್ಸಿ ನಲ್ಲಿ ತುಂಬಾ ವ್ಯತ್ಯಾಸವಿರುವುದರಿಂದ ಮತ್ತು ಮಲ್ಲಪ್ಪರವರು ನನಗೆ ಸಂಬಂಧಿಕರಾಗದೇ ಇರುವುದರಿಂದ ನಾನು ಪ್ರತಿವಾದಿಯ ಜೊತೆಗೆ ಶಾಮೀಲಾಗಿ ನಿಡಿ-2 ರ ಮರಣ ಶಾಸನ ಪತ್ರವನ್ನು ಸೃಷಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮಲ್ಲಪ್ಪರವರು ಮರಣ ಶಾಸನ ಬರೆಯುವ ಒಂದು ವಾರದ ಪೂರ್ವದಲ್ಲಿ ನನ್ನನ್ನು ಭೇಟಿ ಮಾಡಿ ಟಿ.ದೊಡ್ಡಾಪುರ ಗ್ರಾಮದ ಎರಡು ಆಸ್ತಿಗಳನ್ನು ತಮ್ಮ ಮಗ ಸುರೇಶ್ ರವರಿಗೆ ಮರಣ ಶಾಸನ ಬರೆಯಬೇಕು ಎಂದು ತಿಳಿಸಿದ್ದರು. ಸದರಿ ಆಸ್ತಿಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನನಗೆ ಮಲ್ಲಪ್ಪರವರ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ-2 ರ ಮರಣ ಶಾಸನ ಪತ್ರವನ್ನು ಮಲ್ಲಪ್ಪರವರು ಮೊದಲೇ ಬರೆಸಿಕೊಂಡು ಬಂದಿದ್ದರು. ನಾನು ಸದರಿ ನಿಡಿ-2 ರ ಮರಣ ಶಾಸನ ಪತ್ರಕ್ಕೆ ಸಹಿ ಮಾಡಿದಾಗ ನಾನು ಮತ್ತು ಮಲ್ಲಪ್ಪರವರು ಮಾತ್ರ ಇದ್ದೆವು. ಸದರಿ ನಿಡಿ-2 ರ ಮರಣ ಶಾಸನ ಪತ್ರಕ್ಕೆ ನಾನು ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಮಲ್ಲಪ್ಪರವರ ಸಮಕ್ಷಮ ಸಹಿ ಮಾಡಿರುತ್ತೇನೆ. ನಾನು ಸದರಿ ಮರಣ ಶಾಸನ ಪತ್ರಕ್ಕೆ ಸಹಿ ಮಾಡಿ ನಾನು ಹೊರಟು ಹೋದೆನು. ನಂತರ ಸದರಿ ಮರಣ ಶಾಸನ ಪತ್ರಕ್ಕೆ ಯಾರು ಯಾರು ಸಹಿ ಮಾಡಿದರು ಎಂದು ನನಗೆ ಗೊತ್ತಿಲ್ಲ.

ನಿಡಿ-2 ರ ಮರಣ ಶಾಸನ ಪತ್ರ ದ ದಿನಾಂಕದಂದು ಮಲ್ಲಪ್ಪರವರು ಖಾಯಿಲೆಯಿಂದ ಮಾನಸಿಕವಾಗಿ ಮತ್ತು ದೈಹಿಕವಾಗಿ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಮಲ್ಲಪ್ಪರವರು ಖಾಯಿಲೆಯಿಂದ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಲ್ಲಪ್ಪರವರು

ವಯಸ್ಸಾದ ಕಾರಣದಿಂದ ಮತ್ತು ಖಾಯಿಲೆಯಿಂದ ಬಳಲುತ್ತಿದ್ದುದ್ದರಿಂದ ಮನೆಯಿಂದ ಹೊರಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಈ ದಾವೆಯ ಪ್ರತಿವಾದಿಯು ಮೊದಲಿನಿಂದಲೂ ಸ್ನೇಹಿತರು ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಯು ಸ್ನೇಹಿತರಾಗಿರುವುದರಿಂದ ಇಬ್ಬರೂ ಶಾಮೀಲಾಗಿ ದಾವಾ ಅನುಸೂಚಿ ಸ್ವತ್ತುಗಳನ್ನು ಲಪಟಾಯಿಸುವ ಉದ್ದೇಶದಿಂದ ನಿಡಿ-2 ರ ಮರಣ ಶಾಸನ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮಲ್ಲಪ್ಪರವರು ಉಪ ನೊಂದಣಾಧಿಕಾರಿಗಳ ಕಛೇರಿಗೆ ಬಂದಿಲ್ಲ ಮತ್ತು ಯಾವುದೇ ಮರಣ ಶಾಸನ ಪತ್ರವನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಮಲ್ಲಪ್ಪರವರ ಸಮಕ್ಷಮ ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ